

ರಘುನಂದನ
ಚಿತ್ರಗಳು: ಕುಂಟಾಡಿ ನಿತೇಶ್

# ಜಿ. ರಾಜಶೇಖರ

**ಏಪ್ರಿಲ್ 3, 1946 - ಜುಲೈ 20, 2022**

# ದುಗುಡ ತುಂಬಿದ ದೇವದೂತ

ಜಿ. ರಾಜಶೇಖರ ಎಂಬ ದೊಡ್ಡ ಚೇತನವೊಂದು ತೀರಿಕೊಂಡಿದೆ. ಅವರು ತೀರಿಕೊಂಡಂದಿನಿಂದ ಅವರ ಹಲವು ಒಡನಾಡಿಗಳು ಹಾಗೂ ಹಲವು ಲೇಖಕರು ಬರಹಗಳು ಮತ್ತು ವಿಡಿಯೊಗಳ ಮೂಲಕ ಅವರನ್ನು ನೆನೆದು ಶ್ರದ್ಧಾಂಜಲಿ ಸಲ್ಲಿಸಿದ್ದಾರೆ, ಇನ್ನೂ ಸಲ್ಲಿಸುತ್ತಿದ್ದಾರೆ; ತಮ್ಮ ಬದುಕಿನುದ್ದಕ್ಕೂ ಬಿಜೆಪಿ–ಸಂಘ ಪರಿವಾರದ ಫ್ಯಾಸಿಸಂನ ವಿರುದ್ಧ ನಿಂತ ಒಬ್ಬ ಧೀಮಂತ ಲೇಖಕ ಮತ್ತು ಆಕ್ಟಿವಿಸ್ಟ್ ಆಗಿ, ಕನ್ನಡ ಸಾಹಿತ್ಯದ ಒಬ್ಬ ಬಹುಸೂಕ್ಷ್ಮಜ್ಞ ವಿಮರ್ಶಕರಾಗಿ, ಒಬ್ಬ ಗುರುವಾಗಿ, ಹೀರೊ ಆಗಿ, ಪರಮಪ್ರೀತಿಯ ಗೆಳೆಯರಾಗಿ, ಸಹೋದ್ಯೋಗಿಯಾಗಿ, ಭಾಷಣಕಾರರಾಗಿ ಅವರನ್ನು ಕಂಡರಿಸಿದ್ದಾರೆ.

ಆ ಬರಹ ಮತ್ತು ಯೂಟ್ಯೂಬ್–ಫೇಸ್‌ಬುಕ್ ವಿಡಿಯೊಗಳಲ್ಲಿ ಹೇಳಿರುವ ಮಾತುಗಳೆಲ್ಲವೂ ಹುರುಳುಳ್ಳವು. ಅವುಗಳು ಯಾವೊಂದರಲ್ಲಿಯೂ ಅತಿಶಯೋಕ್ತಿ ಇಲ್ಲ. ಯಾಕೆಂದರೆ, ರಾಜಶೇಖರ ಅವರ ವ್ಯಕ್ತಿತ್ವವೇ ಹಾಗಿತ್ತು. ಅತಿಶಯೋಕ್ತಿ, ದೇಶಾವರಿಯ ಮಾತು, ಮತ್ತು ಹಾವಭಾವಗಳಿಂದ ದೂರವಿದ್ದವರು ಅವರು. ಅವರ ಒಡನಾಟಕ್ಕೆ ಬಂದ ಎಲ್ಲರಿಗೂ ತಮ್ಮ ಅವರ ಸಂಬಂಧದಲ್ಲಿ ಆ ತರಹದ ಬಡಿವಾರಕ್ಕೆ ತಾವಿಲ್ಲ, ಅದು ಬೇಕಿಲ್ಲ ಎಂಬ ಅರಿವು ತಾನೇತಾನಾಗಿ ಮೂಡುತ್ತಿತ್ತು. ಆದ್ದರಿಂದ ಅವರನ್ನು ಈಗ ನೆನೆಯುವವರಿಗೂ (ಅವರನ್ನು ನೆನೆಯುವಾಗಲಾದರೂ) ಅಂಥ ಎಲ್ಲವುದರಿಂದ ದೂರವಿರಬೇಕು ಎಂಬ ಎಚ್ಚರವಿರುತ್ತದೆ. ಅಷ್ಟೇಕೆ,